## ಕಬ್ಬಿನ ಗಾಣವೂ ಹೊರೆಯ ಬರೆಯೂ

ಮಹಾರಾಷ್ಟ್ರದ ನಗರ್ ಜಿಲ್ಲೆಯ ಶನಿ ಶಿಂಗ್ನಾಪುರದಿಂದ ಶಿರಡಿಗೆ ಹೋಗುವ ಮಾರ್ಗದಲ್ಲಿ ಸೋನೆ ಎಂಬ ಊರು ಸಿಗುತ್ತದೆ. ಅಲ್ಲಿನ ರಸ್ತೆಯ ಇಕ್ಕೆಲಗಳಲ್ಲಿರುವ ನೂರಾರು ಕಬ್ಬಿನ ಗಾಣಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿರುತ್ತವೆ. ಗಾಣದ ಮೂಲಕ ಕಬ್ಬಿನ ಹಾಲು ಪೂರೈಸುವುದು ಇಲ್ಲಿನ ವಿಶೇಷ. ನಗರ ಪ್ರದೇಶಗಳಲ್ಲಿ ಕಾಣುವಂತೆ ಮಷಿನ್‌ಗಳನ್ನು ಇಲ್ಲಿ ಬಳಸುವುದು. ಕಬ್ಬಿನ ಹಾಲು ತೆಗೆಯಲು ಕೋಣಗಳ ಬದಲಾಗಿ, ಎತ್ತುಗಳು ಹಾಲು ಅರೆಯಲು ಕಣೆ ಸುತ್ತ ಸುತ್ತುತ್ತವೆ. ವಿಶೇಷವೆಂದರೆ ಮಳೆಗಾಲದ ಹೊರತಾಗಿ ಉಳಿದ ದಿನಗಳಲ್ಲಿ ಹಗಲುರಾತ್ರಿ ಎನ್ನದೇ ಇಲ್ಲಿನ ಆಲೆ ಕಣೆಗಳು ಕಾರ್ಯನಿರ್ವಹಿಸುತ್ತವೆ.

ಕಬ್ಬಿನ ಹಾಲು ಕುಡಿದು ಖುಷಿಗೊಂಡ ಮನಸ್ಸಿಗೆ ಹೊರೆಯಂತೆ ಕಂಡದ್ದು ಕಬ್ಬನ್ನು ಹೊತ್ತು ಏದುಸಿರುಬಿಡುತ್ತಿದ್ದ ಎತ್ತುಗಳ ದುಸ್ಥಿತಿ. ಟ್ರ್ಯಾಕ್ಟರ್‌ಗಳ ಈಗಿನ ಕಾಲದಲ್ಲೂ ಈ ಭಾಗದಲ್ಲಿ ಕಬ್ಬನ್ನು ಗದ್ದೆಗಳಿಂದ ಸಾಗಾಟ ಮಾಡಲು ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಎತ್ತಿನ ಗಾಡಿಗಳನ್ನೇ ಬಳಸುತ್ತಿರುವುದು ಕಂಡಿತು. ಸಿಹಿ ಕಬ್ಬು ತುಂಬಿದ ಗಾಡಿಗಳನ್ನು ಹೊತ್ತ ಎತ್ತುಗಳು ಏದುಸಿರು ಬಿಡುತ್ತಾ ಭಾರದ ಹೆಜ್ಜೆಗಳನ್ನು ಹಾಕುತ್ತಿದ್ದದ್ದು ಬೇಸರವಾಯಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ





## ಕತ್ತಿವರಸೆಯ ಶಿಲ್ಪಕಲೆ

ಶಿಲಾ ದೇಗುಲಗಳಲ್ಲಿ ಶಿಲ್ಪಕಲೆಯು ಆ ದೇಗುಲಕ್ಕೆ ಸಂಬಂಧಪಟ್ಟ ದೇವದೇವತೆಯರ ಕಥನಗಳನ್ನು ಸಾರುವುದರ ಜೊತೆಗೆ ರಾಮಾಯಣ, ಮಹಾಭಾರತದಂತಹ ಕಥೆಗಳನ್ನು ಶಿಲ್ಪದಲ್ಲಿ ಮೂಡಿಸಿರುವುದನ್ನು ಕಂಡಿರುತ್ತೇವೆ. ಇದರ ಜೊತೆಗೆ ಆಗಿನ ಕಾಲದ ಯುದ್ಧದ ಚಿತ್ರಗಳು, ಯುದ್ಧದಲ್ಲಿ ಬಳಸಲಾದ ಆನೆ, ಕುದುರೆ, ಒಂಟೆ, ರಥಗಳ ಸಾಲುಗಳು, ರಾಜ ಮನೆತನದ ವೈಭೋಗಗಳು, ನೃತ್ಯ, ಸಂಗೀತ, ವಾದನ ಮುಂತಾದ ಲಲಿತಕಲೆಗಳ ಸಂಭ್ರಮ, ಸಾಮಾಜಿಕ ಬದುಕಿನ ಚಿತ್ರಗಳನ್ನೂ ದೇಗುಲದ ಗೋಡೆಗಳ ಮೇಲೆ, ಸ್ಮಾರಕಗಳ ಮೇಲೆ ಕೆತ್ತಿರುವುದನ್ನು ಕಂಡಿದ್ದೇವೆ. ಆದರೆ ಈ ಶಿಲ್ಪದಲ್ಲಿ ಕತ್ತಿವರಸೆಯ ಅಪರೂಪದ ಸನ್ನಿವೇಶವನ್ನು ಕೆತ್ತಲಾಗಿದೆ. ಶಿರಸ್ತ್ರಾಣ, ಬಲಗೈಯಲ್ಲಿ ಕತ್ತಿ, ಎಡಗೈಯಲ್ಲಿ ರಕ್ಷಣೆಯ ಗುರಾಣಿ, ಕತ್ತಿವರಸೆಯ ಪಕ್ಕಾ ಭಂಗಿ ಇರುವುದನ್ನು ಚಿತ್ರ ಸ್ಪಷ್ಟವಾಗಿ ನಿರೂಪಿಸುತ್ತದೆ. ಇದು ಯುದ್ಧಕಾಲದ ಸನ್ನಿವೇಶವೋ ಇಲ್ಲಾ ಕತ್ತಿವರಸೆ ಕ್ರೀಡೆಯ ಭಾಗವೋ ತಿಳಿಯದು. ಹಂಪಿಯ ಆನೆ ಲಾಯದ ಆವರಣದ ಗೋಡೆಯ ಕಲ್ಲೊಂದರ ಮೇಲೆ ಈ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಶಿಲ್ಪ ಆಗಿನ ಕಾಲದ ಸನ್ನಿವೇಶವೊಂದಕ್ಕೆ ಆಧಾರದಂತಿದೆ.

—ಧರ್ಮಾನಂದ ಶಿರ್ವ, ಬೆಂಗಳೂರು

## ದೇವರಿಗೆ ಹೂವಿನ ಹುಂಡಿ

ದೇವಸ್ಥಾನಗಳಲ್ಲಿ ದೇವರಿಗೆ ಹೂವುಗಳಿಂದ ಅಲಂಕರಿಸಿ ಅದನ್ನು ಪ್ರಸಾದದ ರೂಪದಲ್ಲಿ ಭಕ್ತರಿಗೆ ನೀಡುವುದು ವಾಡಿಕೆ. ಪ್ರತಿನಿತ್ಯ ದೇವರ ಅಲಂಕಾರಕ್ಕೆ ಮುನ್ನ ಹಿಂದಿನ ದಿನ ದೇವರಿಗೆ ಹಾಕಿದ ಹೂವನ್ನು ತೆರವುಗೊಳಿಸುತ್ತಾರೆ. ಈ ಹೂವನ್ನು ನಿರ್ಮಾಲ್ಯ ಅನ್ನುತ್ತಾರೆ. ಹೀಗೆ ತೆರವುಗೊಳಿಸಿದ ಹೂವನ್ನು ನಿರ್ವಹಣೆ ಮಾಡುವುದೇ ದೇವಸ್ಥಾನಗಳಲ್ಲಿ ದೊಡ್ಡ ಸವಾಲು. ಈ ಸವಾಲಿಗೆ ಉತ್ತರವೆಂಬಂತೆ ಗೋವಾದ ಪೊಂಡದಲ್ಲಿರುವ ನಾಗೇಶ್ ಮಹಾರುದ್ರ ದೇವಸ್ಥಾನದಲ್ಲಿ 2 ಹುಂಡಿಗಳನ್ನು ಇಡಲಾಗಿದೆ. ಈ ಹುಂಡಿಗಳಲ್ಲಿ, ದೇವರ ಮೇಲಿಂದ ತೆರವುಗೊಳಿಸಿದ ಹೂವುಗಳನ್ನು ಸಂಗ್ರಹಿಸಲಾಗುತ್ತದೆ. ಹುಂಡಿಗಳು ನಿರ್ಮಾಲ್ಯದಿಂದ ತುಂಬಿದಾಗ, ಅದನ್ನು ದೇವಸ್ಥಾನದ ಆವರಣದಲ್ಲಿನ ಗಿಡಮರಗಳಿಗೆ ಗೊಬ್ಬರದ ರೀತಿ ಹಾಕಲಾಗುತ್ತದೆ. ಎಲ್ಲ ದೇವಸ್ಥಾನಗಳಲ್ಲಿ ಈ ಉಪಾಯ ಕಂಡುಕೊಂಡರೆ ಒಳಿತು.

—ಅಂಜನ್ ಕಾಯ್ಕಿಣಿ, ಸಾಗರ

